ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-2, September-October 2026, Pp. 44-54
©*IIMRD*, Mysuru
www.iimrd.com

ಅಲ್ಲೇ ಇರು – ಧಾರ್ಮಿಕ ಸಾಮರಸ್ಯದ ಭಿನ್ನ ಮುಖಗಳ ನಡುವೆ

ನಾಗೇಂದ್ರ ಎಸ್[1] ಮತ್ತು ಡಾ. ಬಿ. ಪ್ರಭುಸ್ವಾಮಿ[2]
[1]ಸಂಶೋಧನಾ ವಿದ್ಯಾರ್ಥಿ, [2]ಸಹ ಪ್ರಾಧ್ಯಾಪಕರು
ಜೆ ಎಸ್ ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು

ಸಾರಾಂಶ: (Abstract)

ಮುಂಬೈ ಭಾರತದ ಮಿನಿ ರೂಪದಂತಿದೆ. ಬ್ರಿಟಿಷರ ಕಾಲದಲ್ಲಿ ಭಾರತದ ರಾಜಧಾನಿಯು, ಇಂದು ಭಾರತದ ಆರ್ಥಿಕ ರಾಜಧಾನಿಯು ಆಗಿರುವ ಕಡಲ ನಗರಿಯು ಭಾರತದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿರುವ ನಗರಗಳಲ್ಲಿಯೇ ಈ ಶಹರವು ಮೊದಲ ಸ್ಥಾನದಲ್ಲಿದೆ. ಈ ಕಾರಣದಿಂದಾಗಿಯೇ ಉದ್ಯೋಗ, ಶಿಕ್ಷಣ, ಆರೋಗ್ಯದಂತಹ ಹಲವು ಉದ್ದೇಶಗಳಿಗಾಗಿ ಭಾರತದ ವಿವಿಧ ರಾಜ್ಯಗಳಿಂದ ಹೊರಬರುವ ಜನರು ಬಂದು ತಲುಪುವುದು ಈ ಮಹಾನಗರವನ್ನು. ಹೀಗೆ ಬಂದ ವಿವಿಧ ಭಾಷೆಯ ಬಹುಧರ್ಮೀಯ, ಭಿನ್ನ ಸಂಸ್ಕೃತಿಯ ಜನರು ಒಟ್ಟಿಗೆ ಸಾಮರಸ್ಯದಿಂದ ಮುಂಬೈನೊಳಗೆ ಜೀವಿಸುವುದು ಮಹತ್ವದ ಸಂಗತಿ. ಆದರೆ ಈ ಸಾಮರಸ್ಯವು ಇಂದು ಹದಗೆಡುತ್ತಿದೆ. ಬಹುತ್ವ ಕೇವಲ ಭಾರತದ ವೈಶಿಷ್ಟ್ಯ ಮಾತ್ರವಲ್ಲ, ಅದು ಪ್ರಜಾಪ್ರಭುತ್ವ, ಮಾನವೀಯತೆ ಮತ್ತು ರಾಷ್ಟ್ರೀಯ ಏಕತೆಯ ಸಂಕೇತವಾಗಿದೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಬಹುತ್ವವನ್ನು ಕಾಪಾಡುವುದು, ಗೌರವಿಸುವುದು ಅತ್ಯಗತ್ಯವಾಗಿದೆ. ಅದರಲ್ಲೂ ಮುಂಬೈನಂತಹ ಶಹರಗಳಿಗೆ ಸೌಹಾರ್ದತೆ, ಸಹಿಷ್ಣುತೆ, ಸಾಮರಸ್ಯ ಸಾಮಾಜಿಕ ತುರ್ತಾಗಿದೆ.

ಮುಖ್ಯಪದಗಳು (Keywords): *ಮೀರಾ, ಝುಬುನ್ನೀಸ್, ಹೌಸಿ ಆಟ, ಮುಂಬೈ, ಶ್ಯಾನಿ ಮುದುಕಿ, ಜಯಾಬೆನ್, ಸೌಹಾರ್ದತೆ, ಅಲ್ಲೇ ಇರು, ಜನಾಂಗ, ಶಿಕ್ಷಣ, ಬಹುತ್ವ.*

ಪೀಠಿಕೆ

ಭಾರತದ ಬಹುತ್ವಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಬಹುತ್ವವೇ ಭಾರತದ ಅಸ್ಮಿತೆ. ಭಾರತದಲ್ಲಿ ಹಲವು ಭಾಷೆಗಳು, ಭಿನ್ನ ಸಂಸ್ಕೃತಿ ಸಂಪ್ರದಾಯಗಳು ಇರುವಂತೆ ಹಲವು ಧರ್ಮಗಳಿವೆ. ಭಾರತದಲ್ಲಿ ಬಹು ಧರ್ಮಗಳು ತಲೆ ಎತ್ತಲು ಹಲವು ಕಾರಣಗಳಿವೆ. ಕೆಲವು ಸಾಮಾಜಿಕ ಒತ್ತಡದ ಕಾರಣದಿಂದಾಗಿ ಉದ್ಭವಿಸಿದರೆ, ಮತ್ತೆ ಕೆಲವು ಅಧಿಕಾರದ, ರಾಜಕೀಯ ಕಾರಣದಿಂದ ಭಾರತಕ್ಕೆ ಆಗಮಿಸಿವೆ. ಈ ಎಲ್ಲಾ ಧರ್ಮಗಳು ಇಂದು ಭಾರತಾದ್ಯಂತ ತಮ್ಮದೇ ಆದ ಅನುಯಾಯಿಗಳನ್ನು ಹೊಂದಿವೆ. ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಕಾಲ ಕಾಲಕ್ಕೆ ಇವುಗಳ ನಡುವೆ ಸಂಘರ್ಷ, ಅಸಹನೆ, ವಿರೋಧಗಳು ವ್ಯಕ್ತವಾಗಿದೆ. ಆದರೂ ಭಾರತೀಯರು ಇವುಗಳೆಲ್ಲವನ್ನು ಆರಗಿಸಿಕೊಂಡು ಮುನ್ನಡೆಯುವುದರ ಮೂಲಕ

Please cite this article as: ನಾಗೇಂದ್ರ ಎಸ್ ಮತ್ತು ಬಿ. ಪ್ರಭುಸ್ವಾಮಿ. (2026). ಅಲ್ಲೇ ಇರು – ಧಾರ್ಮಿಕ ಸಾಮರಸ್ಯದ ಭಿನ್ನ ಮುಖಗಳ ನಡುವೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(2).* ಪು.ಸಂ. 44–54

ಇಡೀ ವಿಶ್ವಕ್ಕೆ ಮಾದರಿಯಾಗಿದ್ದಾರೆ. ಅಲ್ಲದೇ, ವಿವಿಧ ಧರ್ಮ, ಸಂಸ್ಕೃತಿಗಳಿಂದ ರೂಪ ಪಡೆದ ವೈವಿಧ್ಯಮಯ ಕಲೆ, ಸಾಹಿತ್ಯ, ಸಂಗೀತ, ನೃತ್ಯ ಇತ್ಯಾದಿ ಅಂಶಗಳಿಂದಾಗಿ ಭಾರತೀಯ ಸಂಸ್ಕೃತಿ ಶ್ರೀಮಂತವಾಗಿದೆ. ಭಾರತವೇ ಒಂದು ಮಿನಿ ಪ್ರಪಂಚವಾಗಿದೆ. ಇಂತಹ ಮಹತ್ತರವಾದ ಗುರುತನ್ನು ಕೊಟ್ಟ ಭಾರತದ ವೈವಿಧ್ಯತೆಯನ್ನು ಗೌರವಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ.

ಕನ್ನಡ ನೆಲವು ಸಹ ವೈವಿಧ್ಯತೆಯಿಂದ ಕೂಡಿದ್ದು, ಭಾಷೆ, ಧರ್ಮ, ಸಂಸ್ಕೃತಿಯ ವಿಚಾರದಲ್ಲಿ ಬಹುತ್ವವನ್ನು ಹೊಂದಿದೆ. ಸಾವಿರಾರು ವರ್ಷಗಳಿಂದಲೂ ಬಿನ್ನಮತೀಯ ರಾಜರು, ಸಾಹಿತಿಗಳು, ಶರಣರು, ಸಂತರು ಸಾಮರಸ್ಯದ ನೆಲೆಯಲ್ಲಿ ಈ ನೆಲವನ್ನು ಕಟ್ಟುತ್ತಾ ಬಂದಿದ್ದಾರೆ. ಅಂತಹ ಹಲವು ಎಳೆಗಳನ್ನು ಗುರುತಿಸಬಹುದು. ಕನ್ನಡದಲ್ಲಿ ಬೌದ್ಧ ಸಾಹಿತ್ಯ ಅಷ್ಟಾಗಿ ದೊರಕದ ಕಾರಣ ಕನ್ನಡದ ಮೊದಲ ಸಾಹಿತ್ಯ ಕೃತಿಗಳ ರಚನಕಾರರು ಜೈನ ಕವಿಗಳೆಂದು ಗುರುತಿಸಲಾಗಿದೆ. ಜೈನನಾದ ಅಮೋಘವರ್ಷ ನೃಪತುಂಗನು ಭಿನ್ನ ಧರ್ಮೀಯರ ಕಲ್ಯಾಣಕ್ಕಾಗಿ ಕೊಲ್ಲಾಪುರದ ಶ್ರೀ ಮಹಾಲಕ್ಷ್ಮಿಗೆ ತನ್ನ ಹೆಬ್ಬೆರಳನ್ನು ಅರ್ಪಿಸಿದ ಘಟನೆಯನ್ನು ಶಾಸನಗಳು ಉಲ್ಲೇಖಿಸಿವೆ. ಜೈನನಾದ ಪಂಪನು 'ಮಾನವ ಜಾತಿ ತಾನೊಂದೇ ವಲಂ' ಎಂಬ ನೆಲೆಯಲ್ಲಿ ಸಾಹಿತ್ಯ ರಚಿಸುವ ಮೂಲಕ ಏಕತೆಯನ್ನು ಮೆರೆದಿದ್ದಾನೆ.

ಸಮಾನತೆ, ಸಾಮರಸ್ಯದ ನೆಲೆಯಲ್ಲಿ ಶರಣ ಸಾಹಿತ್ಯ ಮಾಡಿದ ಕ್ರಾಂತಿ ಅಪಾರವಾದದ್ದು. ಬಹು ನೆಲೆಯಲ್ಲಿ ಸಾಮರಸ್ಯವನ್ನು ಏರ್ಪಡಿಸಿದ ಪ್ರಮುಖ ಘಟ್ಟ ವಚನ ಸಾಹಿತ್ಯವಾಗಿದೆ. 'ದಯೆಯೇ ಧರ್ಮದ ಮೂಲವಯ್ಯ' ಎಂಬ ವಚನಗಳ ಸಂದೇಶ ಇಡೀ ಮನುಕುಲಕ್ಕೆ ಅನುಕರಣೀಯ ಸಂದೇಶಗಳಾಗಿವೆ. ವೈಷ್ಣವ ಮತ್ತು ದಾಸ ಸಾಹಿತ್ಯವು ಸಾಮರಸ್ಯದ ನೆಲೆಯಲ್ಲಿ ಸಾಕಷ್ಟು ಶ್ರಮಿಸಿದೆ. ದಾಸರ 'ಕುಲ ಕುಲ ಕುಲವೆಂದು ಹೊಡೆದಾಡದಿರಿ' ಹಾಗೂ 'ಮಾನವ ಜನ್ಮ ದೊಡ್ಡದು' ಇತ್ಯಾದಿ ಕೀರ್ತನೆಗಳು ದಾಸ ಸಾಹಿತ್ಯದ ಕೊಡುಗೆಯಾಗಿದೆ. ಇನ್ನು ಮುಸ್ಲಿಂ ರಾಜರು ಮತ್ತು ಸಂತರು ಕನ್ನಡ ನೆಲಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಇಂಡೋ ಇಸ್ಲಾಮಿಕ್ ಶೈಲಿಯ ಭಾವೈಕ್ಯತೆ, ಸೂಫಿ ಪಂಥದ ಸಂತರು ರಚಿಸಿದ ತತ್ವಪದಗಳು ಸಾಮರಸ್ಯದ ಸಂದೇಶವನ್ನು ಸಾರಿವೆ. ಅದಕ್ಕಾಗಿಯೇ ಇಂದಿಗೂ ಸಹ ಅನ್ಯ ಧರ್ಮದವರು ಸಂತರ ದರ್ಗಾಗಳಿಗೆ ಭೇಟಿ ನೀಡಿ ಭಕ್ತಿಯನ್ನು ಸಮರ್ಪಿಸುತ್ತಾರೆ. ಒಟ್ಟಾರೆ ಪ್ರಾಚೀನ ಕರ್ನಾಟಕವು ಹಲವು ಧಾರ್ಮಿಕ ಸಂಘರ್ಷಗಳ ನಡುವೆಯು ಬಹುತ್ವದಿಂದ ಕೂಡಿದ, ಸಾಮರಸ್ಯದ ಬದುಕನ್ನು ಸಾರಿದ, ಸಾಗಿದ ಕಾಲಘಟ್ಟವಾಗಿದೆ.

ಆಧುನಿಕ ಕಾಲಘಟ್ಟದಲ್ಲಿಯೂ ಸಹ ಸಾಮರಸ್ಯದ ನೆಲೆಯಲ್ಲಿ ಹೆಜ್ಜೆ ಹಾಕಿದ ಹಲವು ನಿದರ್ಶನಗಳಿವೆ. ಕ್ರೈಸ್ತ ಮಿಷನರಿಗಳ ಮೂಲಕ ಕ್ರೈಸ್ತ ವಿದ್ವಾಂಸರು ಕನ್ನಡ ನಾಡು–ನುಡಿಗೆ ಕೊಟ್ಟ ಕೊಡುಗೆ ಅಪಾರವಾಗಿದೆ. ಪ್ರಾಚೀನ ಕೃತಿಗಳ ಸಂಪಾದನೆ, ಶಾಸನಗಳ ಸಂಪಾದನೆ, ಕೃತಿಗಳ ಮುದ್ರಣ ಇತ್ಯಾದಿ ಕಾರ್ಯಗಳು ಕನ್ನಡ ನಾಡನ್ನು ಸಾಂಸ್ಕೃತಿಕವಾಗಿ ಶ್ರೀಮಂತವಾಗಿಸಿದವು. ನವೋದಯದಿಂದ ನವ್ಯದವರೆಗೆ ನಿಸ್ಸಾರ್ ಅಹಮದ್ ಅವರನ್ನು ಬಿಟ್ಟರೆ ಬೇರೆ ಮುಸ್ಲಿಂ ಸಾಹಿತಿಗಳು ಮುನ್ನೆಲೆಗೆ ಬಂದದ್ದು ಕಡಿಮೆ. ಆದರೆ ಆ ಕಾಲಘಟ್ಟದ ಸಾಹಿತ್ಯದೊಳಗೆ ಸಾಮರಸ್ಯ ನೆಲೆಯಲ್ಲಿ ಹಲವು ಮುಸ್ಲಿಂ, ಕ್ರಿಶ್ಚಿಯನ್ ಪಾತ್ರಗಳನ್ನು ತಮ್ಮ ಸಾಹಿತ್ಯದೊಳಗೆ ತಂದಿದ್ದಾರೆ. ಆದರೆ 70ರ ದಶಕದ ನಂತರವೇ ಮುಸ್ಲಿಂ ಕವಿಗಳು, ಲೇಖಕರು ಕನ್ನಡ ಸಾಹಿತ್ಯದೊಳಗೆ

ಕಾಣಿಸಿಕೊಳ್ಳುವುದು ಮತ್ತು ಸಮರ್ಥ ಪಾತ್ರಗಳು ಸೃಷ್ಟಿಯಾಗಿರುವುದು. "ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಪಾತ್ರಗಳು ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡಿದ್ದರು, ಅವುಗಳು ಜಟಕಾ ಸಾಬಿಯೋ, ವೇಶ್ಯೆಯೋ, ಮೀನು ಮಾರುವವನೋ ಆಗಿ ಕಾಣಿಸಿಕೊಂಡಿದ್ದರೆ ಹೊರತು, ಸಾಮಾನ್ಯ ಮುಸ್ಲಿಂ ಸಮಾಜದ ನೈಜ ಚಿತ್ರಣ ಕನ್ನಡ ಸಾಹಿತ್ಯದಲ್ಲಿ ಮೂಡಿಬರಲೇ ಇಲ್ಲ"[1] ಎಂಬ ಸಾರಾ ಅಬೂಬಕ್ಕರ್ ಅವರ ಮಾತುಗಳು ಗಮನಾರ್ಹವಾದವು. ಇದಕ್ಕೆ ಕಾರಣವನ್ನು ಸಹ ಸಾರಾ ಅಬೂಬಕ್ಕರ್ ಅವರೇ ನೀಡುತ್ತಾರೆ. "ಕನ್ನಡಿಗರಿಗೆ ಮುಸ್ಲಿಮರ ಕುರಿತು ಇದ್ದಂತಹ ಅಜ್ಞಾನ, ತಾತ್ಸಾರ. ಅವರ ಬದುಕಿನ ಕುರಿತು ತಿಳಿಯಲು ಇದ್ದಂತಹ ಔದಾಸೀನ್ಯ, ನಿರಾಸಕ್ತಿ ಒಂದೆಡೆಯಾದರೆ, ಅವಿದ್ಯಾವಂತ ಮುಸ್ಲಿಮರು ಕನ್ನಡ ಭಾಷೆ ಕಾಫಿರರ ಭಾಷೆ ಎಂದು ತಿಳಿದುಕೊಂಡು ತಮ್ಮ ಮಕ್ಕಳಿಗೆ ಕನ್ನಡ ಭಾಷೆ ತಿಳಿಯದಂತೆ ಬೆಳೆಸಿ ಅವರನ್ನು ದ್ವೀಪವಾಗಿಸಿದುದು ಪ್ರಮುಖ ಕಾರಣವಾಗಿದೆ."[2] ಎಂದಿದ್ದಾರೆ. 70ರ ನಂತರ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಾಹಿತಿಗಳು ಹೆಚ್ಚು ಕಾಣಿಸಿಕೊಂಡಿದ್ದಾರೆ. ಸಾರಾ, ಬಾನು ಮುಷ್ತಾಕ್, ಅಬ್ದುಲ್ ರಶೀದ್, ಬೋಳುವಾರ ಮಹಮ್ಮದ್ ಕುಂಞ, ಫಕೀರ್ ಮಹಮ್ಮದ್ ಕಾಟ್ಪಾಡಿ, ಕೆ ಶರೀಫ ಇತ್ಯಾದಿ ಮುಸ್ಲಿಂ ಸಾಹಿತಿಗಳು ಕನ್ನಡ ಸಾಹಿತ್ಯದೊಳಗೆ ತಮ್ಮ ಧರ್ಮ ಮತ್ತು ಸಂಸ್ಕೃತಿ ಕುರಿತ ಹಲವು ಸಂಗತಿಗಳನ್ನು ಸಾಹಿತ್ಯದೊಳಗೆ ತಂದು ನಾಡಿನ ಬಹುತ್ವಕ್ಕೆ ಕೊಡುಗೆ ನೀಡಿದ್ದಾರೆ.

ಕನ್ನಡ ನಾಡಿನೊಳಗಿನ ಸಾಹಿತ್ಯದಂತೆಯೇ ಹೊರ ನಗರವಾದ ಮುಂಬೈನಲ್ಲಿಯೂ ಸಾಮರಸ್ಯ, ಬಹುತ್ವ, ಏಕತೆಯ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ರಚನೆಯಾಗುತ್ತಿದೆ. ಇಡೀ ಭಾರತದ ಮಿನಿರೂಪದಂತಿರುವ ಮುಂಬೈ ಒಳಗೆ, ಹಲವು ಭಾಷೆ, ಧರ್ಮ, ಸಂಸ್ಕೃತಿಗಳು ಬೆರೆತಿರುವ ಇಂತಹ ಪರಿಸರದಲ್ಲಿ ಭಿನ್ನತೆಯ ಮಹಾಪೂರವೇ ಕ್ರೋಢೀಕರಿಸಿರುತ್ತದೆ. ಹೀಗಿರುವಾಗ ಬಹು ಸಂಸ್ಕೃತಿಯನ್ನು ಗೌರವಿಸುವುದು, ಪರಸ್ಪರ ಸಾಮರಸ್ಯ ಕಾಪಿಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಇಂತಹ ಮೌಲ್ಯಗಳನ್ನು ಮುಂಬೈ ಕನ್ನಡ ಸಾಹಿತಿಗಳು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಅಭಿವ್ಯಕ್ತಿಸಿ, ಓದುಗರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವ ಮೂಲಕ ಸಾಮರಸ್ಯಕ್ಕೆ ಒತ್ತು ನೀಡಿದ್ದಾರೆ. ಇಂತಹ ಕಾರ್ಯವನ್ನು ಪ್ರಬಲವಾಗಿ ತಮ್ಮ ಸಾಹಿತ್ಯದ ವಸ್ತುವಾಗಿಸಿಕೊಂಡ ಮುಂಬೈ ಕನ್ನಡ ಸಾಹಿತಿಗಳಲ್ಲಿ, ಲೇಖಕಿ ಮಿತ್ರಾ ವೆಂಕಟ್ರಾಜರು ಪ್ರಮುಖರು. ಈ ನಿಟ್ಟಿನಲ್ಲಿ ಅವರ ಹಕ್ಕಿ ಮತ್ತು ಅವಳು ಸಂಕಲನದ 'ಅಲ್ಲೇ ಇರು' ಕಥೆ ಬಹು ಮುಖ್ಯವಾದದ್ದು.

ನಿರೂಪಕಿ ಮೀರಾ, ಝುಬುನ್ನಿಸ್, ಜಯಾಬೆನ್ ಮತ್ತು ಪತಿ ಮೆಹತಾಜಿ, ಸೀತಾ, ಶೀಪ್ರಾ, ಜೆಸ್ಸಿ ಡಿಸೋಜಾ, ಸಿಂಧಿ ಮುದುಕಿ ಶ್ಯಾನಿ, ಅಫ್ತಾಬ್ ಈ ಮೊದಲಾದ ಪಾತ್ರಗಳು ಈ ಕಥೆಯಲ್ಲಿ ಕಂಡುಬರುತ್ತವೆ. ಕಥೆಯ ಪ್ರಾರಂಭದಲ್ಲೇ ಮೀರಾಳ ಮುಂಬೈ ಕಲ್ಪನೆ ಮತ್ತು ಆಕೆ ಮೊದಲ ಬಾರಿಗೆ ಕಂಡ ಮುಂಬೈನ ವಾಸ್ತವತೆ ಮುಖಾಮುಖಿಯಾಗುತ್ತದೆ. ಮದುವೆಯಾಗಿ ಮುಂಬೈನ ಬಹು ಮಹಡಿ ಕಟ್ಟಡಕ್ಕೆ ಬರುವ ಮೀರಾಳಿಗೆ ಮೊದಲು ಪರಿಚಯವಾದದ್ದು ಝುಬುನ್ನೀಸಳು. ಆಕೆಯಿಂದಾಗಿ ಮೀರ ವಾಸವಿದ್ದ ಕಟ್ಟಡದ ಇತರ ಜನರ ಜೊತೆ ಹೆಚ್ಚು ಆಪ್ತವಾಗುತ್ತಾಳೆ. ಕಟ್ಟಡದೊಳಗಿನ ಭಿನ್ನ ಧಾರ್ಮಿಕತೆ, ವೈವಿಧ್ಯಮಯ ಸಂಸ್ಕೃತಿಯ ನಡುವೆ ಎಲ್ಲರಲ್ಲೂ ಇದ್ದ ಸ್ನೇಹ, ಸಂಬಂಧ, ಸೌಹಾರ್ದತೆ ಗಮನಾರ್ಹವಾದದ್ದು. ಸಾಮರಸ್ಯ ಬದುಕಿಗೆ ಎಲ್ಲರೂ ಸ್ಪಂದಿಸುವ ಪರಿ ಮುಖ್ಯವಾದದ್ದು. ಈದ್, ಗಣಪತಿ, ನವರಾತ್ರಿ, ಹೋಳಿ, ದೀಪಾವಳಿ

ಕ್ರಿಸ್ಮಸ್ ಈ ಎಲ್ಲಾ ಹಬ್ಬಗಳು ಕೇವಲ ಒಂದು ಮನೆಯ ಹಬ್ಬವಾಗಿರಲಿಲ್ಲ. ಮತೀಯ ಗುರುತುಗಳನ್ನು ಬದಿಗೊತ್ತಿ ಎಲ್ಲರೂ ಕೂಡಿ ಈ ಎಲ್ಲಾ ಹಬ್ಬಗಳಲ್ಲಿ ಭಾಗಿಯಾಗುತ್ತಿದ್ದ ಪರಿ ಸೌಹಾರ್ದತೆಯ ಸಂಕೇತವಾಗಿದೆ.

ಸೌಹಾರ್ದತೆಯ ನಡುವೆಯೆ ಕೆಲ ಅಸಮಾಧಾನಗಳು ಸಹ ಇದ್ದವು. ಆದರೆ ಅದನ್ನು ಬದಿಗೊತ್ತಿ ಒಂದೇ ಮನೆಯ ಸದಸ್ಯರಂತಿದ್ದರು. ಹೀಗೆ ಕೆಲವು ವರ್ಷಗಳ ನಂತರ ಮುಂಬೈನಲ್ಲಾದ ಒಂದು ಕೋಮುಗಲಬೆ ಈ ಕಟ್ಟಡಕ್ಕೂ ಆವರಿಸಿತು. ಮುಸ್ಲಿಂ ಸಮುದಾಯದವಳಾದ ಝೋಬುನ್ನೀಸ್ ಮತ್ತು ಅವಳ ಕುಟುಂಬವನ್ನು ಗಲಬೆಕೋರರ ಕೈಯಿಂದ ತಪ್ಪಿಸಲು ಮುಂಬೈನಲ್ಲೆ ಇದ್ದ ಅವರ ಸಂಬಂಧಿಗಳ ಮನೆಗೆ ಜೋಪಾನವಾಗಿ ಕಳುಹಿಸುತ್ತಾರೆ. ಇತ್ತ ಆಕೆ ಜೋಪಾನವಾಗಿ ತಲುಪಿದ್ದೇನೆ ಎಂದು ಕರೆ ಮಾಡಿದ್ದಾಗ ಎಲ್ಲರೂ ನಿಟ್ಟುಸಿರು ಬಿಟ್ಟು, 'ಇನ್ನಿಲ್ಲಿ ನಮ್ಮವರೇ' ಎಂಬ ಮಾತು ನಿರೂಪಕಿಯನ್ನು ಘಾಸಿಗೊಳಿಸುತ್ತವೆ. ಅತ್ತ ಝೋಬುನ್ನಿಸಳು ಕರೆ ಮಾಡಿದಾಗ 'ಇಲ್ಲಿ ಎಲ್ಲಾ ನಮ್ಮ ಜನಗಳೇ' ಎಂಬ ಮಾತು ಸಹ ಮೀರಾಳನ್ನು ಮತ್ತಷ್ಟು ಚಿಂತಿಸುವಂತೆ ಮಾಡುತ್ತವೆ. ಒಂದು ಘಟನೆ ಎಲ್ಲರ ಭಿನ್ನಮುಖಗಳನ್ನು ಅನಾವರಣಗೊಳಿಸಿದ್ದು ಮತ್ತು ಬದಲಾದ ಕಾಲಘಟ್ಟದಲ್ಲಿನ ಬದಲಾದ ಜನರ ಮನಸ್ಥಿತಿ ಕಂಡು ಮೀರ ಮನದಲ್ಲೇ ಹಲವು ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಚಿಂತಿಸುವುದರೊಂದಿಗೆ ಕಥೆ ಮುಕ್ತಾಯವಾಗಿದೆ.

ಕತೆಯ ಅರ್ಧ ಭಾಗ ಫ್ಲಾಶ್ ಬ್ಯಾಕ್ (ಹಿನ್ನೋಟ) ತಂತ್ರದಲ್ಲಿ ಎಣೆಯಲ್ಪಟ್ಟಿದೆ. ನಿರೂಪಕಿ ಮೀರಾ ತನ್ನ 20 ವರ್ಷದ ಮುಂಬೈ ಅನುಭವವನ್ನು ಹಾಗೂ ವಾಸವಿದ್ದ ಕಟ್ಟಡದ ಜನರಲ್ಲಿದ್ದ ಸ್ನೇಹ, ಸಾಮರಸ್ಯ, ಅಸಮಾಧಾನಗಳನ್ನು ಮೆಲುಕು ಹಾಕುವ ಮೂಲಕ ಕಥೆ ಸಾಗುತ್ತದೆ. ಕಥೆಯು ಮಹಾನಗರದಲ್ಲಿ ಆದ ಒಂದು ಕೋಮುಗಲಭೆಯ ಸುತ್ತ ಹೆಣೆಯಲ್ಪಟ್ಟಿದ್ದು, ಇದು ಇಡೀ ಕಥೆಯನ್ನು ಎರಡು ವಿಭಾಗವನ್ನಾಗಿ ಮಾಡಿದೆ. ಕತೆಯನ್ನು ಇಬ್ಭಾಗವಾಗಿಸುವ ಸಾಲು "ಐವತ್ತು ವರ್ಷಗಳ ಮೇಲಾಯಿತು ಮುಂಬೈಗೆ ಬಂದು ಮಗಳೇ, ಈ ನಮೂನೆ ನೋಡಿಲ್ಲ,"[3] ಎಂದು ಕಥೆಯ ಮೌಸಿ ಎಂಬ ಪಾತ್ರ ಹೇಳುವ ಸಾಲುಗಳ ಮೂಲಕ ಮುಂಬೈನ ಎರಡು ಕಾಲಘಟ್ಟವನ್ನು, ಆ ಮೂಲಕ ಮುಂಬೈನ ಬದಲಾದ ಪರಿಸರವನ್ನು, ಸಾಮಾಜಿಕ ವ್ಯವಸ್ಥೆಯನ್ನು ಗುರುತಿಸಬಹುದಾಗಿದೆ. ಕಥೆಯ ಮೊದಲ ಅರ್ಧ ಕಟ್ಟಡದಲ್ಲಿದ್ದ ಭಿನ್ನ ಧರ್ಮೀಯ ಜನರೊಂದಿಗಿನ ಸಾಮರಸ್ಯದ ಬದುಕನ್ನು ಚಿತ್ರಿಸುತ್ತದೆ. ಹೊಸದಾಗಿ ಮುಂಬೈನ ಕಟ್ಟಡವೊಂದಕ್ಕೆ ಬಂದ ನಿರೂಪಕಿಗೆ ಮುಂಬೈಯನ್ನು ಪರಿಚಯಿಸಿದ್ದು ಮತ್ತು ಕಟ್ಟಡದಲ್ಲಿನ ಇತರೆ ಜನರಿಗೆಲ್ಲ ಆಕೆಯನ್ನು ಪರಿಚಯಿಸಿದ್ದು ಝೋಬುನ್ನೀಸಳು. ವಿಶಿಷ್ಟ ವ್ಯಕ್ತಿತ್ವ, ಎಲ್ಲರಲ್ಲೂ ಸ್ನೇಹವನ್ನು ಬಯಸುವ, ಸೌಹಾರ್ದತೆಯನ್ನು ಕಾಪಾಡುವ, ಕಷ್ಟಕ್ಕೆ ನೆರವಾಗುವಂತಹ ಗುಣಗಳಿರುವ ಹೆಂಗಸರು. ಆಕೆಯಂತೆಯೇ ಕಟ್ಟಡದಲ್ಲಿದ್ದ ಜಯಾಬೆನ್, ಸೀತಾ, ಶಿಪ್ರಾ ಇತ್ಯಾದಿ ಪಾತ್ರಗಳು ಸಹ ಸ್ನೇಹಮಯಿ ಜೀವಗಳು. ಯಾವುದೇ ಹಬ್ಬವಾದರೂ ಎಲ್ಲರೂ ಪಾಲ್ಗೊಳ್ಳುವ ಪರಿ ಸಾಮರಸ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಇನ್ನು ಈ ಹಬ್ಬಗಳ ನಂತರ ಎಲ್ಲರೂ ಕೂಡಿ ಆಡುತ್ತಿದ್ದ "ಹೌಸಿ ಆಟ"[4] ಸಾಮರಸ್ಯದ ಪ್ರಮುಖ ಅಂಶವಾಗಿದೆ.

ಕಥೆಯಲ್ಲಿರುವ ಜಯಾಬೆನ್ ಮತ್ತು ಮೆಹತಾಜಿ ವೃದ್ಧ ದಂಪತಿಗಳು ಜೈನ ಧರ್ಮಕ್ಕೆ ಸೇರಿದವರು. ಅವರನ್ನು "ಬಾ ನನ್ನ ಪಿತಾಜಿಸೆ ಮಿಲಾವುಂಗಿ"[5] ಎಂದು ಝೋಬುನ್ನೀಸಳು ಮೀರಳಿಗೆ ಪರಿಚಯಿಸುತ್ತಾಳೆ.

ಝೋಬುನ್ನೀಸಳೊಂದಿಗೆ ಆತ್ಮೀಯತೆ ಬೆಳೆದಂತೆ ಮೀರ ಆಕೆಯ ಬೋಳು ಹಣೆಗೆ ಬೊಟ್ಟು ಇಟ್ಟರೆ ಚಂದ ಎಂದು ಸಲಹೆ ನೀಡಿದಾಗ, ಆಕೆಯುಟ್ಟ ಸೀರೆಯ ಬಣ್ಣದ್ದೇ ಹಣೆಬೊಟ್ಟು ಇಟ್ಟುಕೊಂಡು 'ಈಗ ಖುಷಿಯಾಯ್ತು' ಎನ್ನುವ ಆಕೆ ಭಿನ್ನ ಸಂಸ್ಕೃತಿಯನ್ನು ಗೌರವಿಸುವ ಸೌಹಾರ್ದತೆಯನ್ನು ಕಾಪಾಡುವ ಪರಿಯನ್ನು ತಿಳಿಸುತ್ತದೆ. ಮುಖ್ಯವಾಗಿ ಇದು ಒಂದು ಸಹಜ ಸಂಗತಿಯಂತೆ ಆಕೆ ನೋಡುತ್ತಾಳೆ.

ಕಟ್ಟಡದಲ್ಲಿ ಯಾರ ಮನೆಯ ಅಡುಗೆ ಸಾಮಾನುಗಳನ್ನು ಯಾರು ಬೇಕಾದರೂ ಹೋಗಿ ತರುವಂತಹ ಸ್ವಾತಂತ್ರ್ಯವಿತ್ತು. ಒಬ್ಬರ ಮನೆಯಲ್ಲಿ ತಿಂಡಿ ತಡವಾದರೆ ಮತ್ತೊಂದು ಮನೆಯಿಂದ ಬರುತ್ತಿತ್ತು. ಒಬ್ಬರ ಮನೆಯ ಸಿಹಿ ತಿನಿಸುಗಳು ಕಟ್ಟಡದ ಎಲ್ಲರ ಮನೆಯ ಬಾಗಿಲನ್ನು ಪ್ರವೇಶಿಸುತ್ತಿದ್ದವು. ಹೀಗಿದ್ದ ಕಟ್ಟಡದ ಜನರ ನಡುವೆ ಕೇವಲ ಪ್ರೀತಿ, ಸ್ನೇಹ, ಸಹಕಾರ ಮಾತ್ರವಲ್ಲ ಕೆಲವು ಅಸಮಾಧಾನಗಳ ಎಳೆಗಳು ಇದ್ದವು. ಜೈನರಾದ ಜಯಬೆನ್ ಎಲ್ಲರೊಂದಿಗೆ ಹರಟೆ ಹೊಡೆಯಲು ಝೋಬುನ್ನೀಸಾಳ ಮನೆಯನ್ನು ಹೊಕ್ಕರೆ ಅವರ ಮನೆಯಲ್ಲಿ ನೀರನ್ನು ಸಹ ಕುಡಿಯುತ್ತಿರಲಿಲ್ಲ. ಮೇಲ್ನೋಟಕ್ಕೆ ಅವರ ರೀತಿ ನೀತಿಗೆ ಚಕಾರ ಎತ್ತದ ಝೋಬುನ್ನಿಸಳು, ಮೀರಾಳೊಂದಿಗೆ ಏಕಾಂತದಲ್ಲಿದ್ದಾಗ ಅಸಮಾಧಾನ ಹೊರಹಾಕುತ್ತಿದ್ದಳು. "ಆ ಶಿಪ್ರಾ ಮೀನು ಮತ್ತೊಂದು ತಿನ್ನುವುದಿಲ್ಲವೇ? ಆದರೆ ಜಯಬೆನ್ನಿಗೆ ಅದು ಅಡ್ಡಿಯಿಲ್ಲ. ನಮ್ಮ ಮನೆಯಲ್ಲಿ ಮಾತ್ರ"[6] ಎಂಬ ಮಾತುಗಳು ಆಕೆಗೆ ಇದ್ದ ಅಸಮಾಧಾನವನ್ನು ಹೇಳುತ್ತವೆ. ಆದರೆ ಝೋಬುನ್ನೀಸಳಿಗೆ ಅಪೆಂಡಿಸೈಟಿಸ್ ಆಗಿ ಆಸ್ಪತ್ರೆಯಲ್ಲಿದ್ದಾಗ ಜಯಾಬೆನ್ ಅವರೊಟ್ಟಿಗೆ ಇದ್ದು ಆಕೆಯ ಸೇವೆ ಮಾಡಿದ ಪರಿ ಹಲವು ಅಸಮಾಧಾನಗಳ ನಡುವೆಯೂ, ಸಂಪ್ರದಾಯದ ಬಿಗಿ ಗೋಡೆಯನ್ನು ದಾಟಿ ಸಹಾಯ ಹಸ್ತ ನೀಡುವ, ಕಷ್ಟದ ಸನ್ನಿವೇಶದಲ್ಲಿ ನೆರವಾಗುವ ಪರಿ ಕಥೆಯಲ್ಲಿ ಮಹತ್ವವಾದದ್ದು.

ಅದೇ ಕಟ್ಟಡದಲ್ಲಿ ವಾಸಿಸುವ ಸಿಂದಿ ಮುದುಕಿ ಶ್ಯಾನಿ ಧರ್ಮ ದ್ವೇಷಿ ಹೆಂಗಸು. ಬಹು ವರ್ಷಗಳ ಹಿಂದೆ ಕರಾಚಿಯಲ್ಲಿ ತನಗಾದ ಅವಸ್ಥೆಯನ್ನು ಸದಾ ಗುನುಗುವ ಈ ಮುದುಕಿ ಮುಸ್ಲಿಂ ಸಮುದಾಯದ ಕಡುದ್ವೇಷಿ. ಝೋಬುನ್ನೀಸಳ ಮಗ ಅಫ್ತಾಬ್ ಕ್ರಿಕೆಟ್ ಆಡುವಾಗ ಆತ ಒಡೆದ ಬಾಲು, ಸಿಂಧಿ ಮುದುಕಿ ಮನೆಯ ಕಿಟಕಿಯ ಗಾಜನ್ನು ಒಡೆದು ಅವಾಂತರ ಸೃಷ್ಟಿಸಿತು. ಕೋಪಗೊಂಡ ಮುದುಕಿ ಝೋಬುನ್ನೀಸಾಳ ಮನೆಯ ಮುಂದೆ ಆಕೆ ಮತ್ತು ಮಗನನ್ನು ಬೈದದ್ದಲ್ಲದೆ, ಇಡೀ ಮುಸ್ಲಿಂ ಸಮುದಾಯವನ್ನು ಹೀಗಳೆದಳು. ಮಧ್ಯದಲ್ಲಿ ಯಾರಾದರೂ ಸಮಾಧಾನಿಸಲು ಹೋದರೆ "ನಿಮಗೆಲ್ಲಾ ಏನೂ ತಿಳಿಯದು, ನಾನು ಈ ಜನಗಳ ಬುದ್ಧಿಯನ್ನು ಪ್ರತ್ಯಕ್ಷ ನೋಡಿದ್ದೇನೆ. ನನ್ನ ಗಂಡನನ್ನು ನನ್ನ ಕಣ್ಣೆದುರೇ ಮುಗಿಸಿದ್ದನ್ನು ನಾನು ಎಂದಿಗಾದರೂ ಮರೆತೇನೆ. ಕಣ್ಣಲ್ಲಿ ರಕ್ತವಿಲ್ಲದವರು ಇವರು."[7] ಎಂದು ಅಸಮಾಧಾನವನ್ನು ಹೊರಹಾಕುತ್ತಿದ್ದಳು. ಅಮಾಯಕಿ ಝೋಬುನ್ನೀಸಳು ನೊಂದುಕೊಂಡಳು. ಕೆಲ ದಿನಗಳ ನಂತರ ಅದೇ ಶ್ಯಾನಿ ಮುದುಕಿ ಅಡುಗೆ ಕೋಣೆಯಲ್ಲಿ ಕಾಲು ಜಾರಿ ಬಿದ್ದು ಅಳುವಾಗ, ಮೀರಾ ಶಿಪ್ರಾ ಜೊತೆ ಝೋಬುನ್ನೀಸಳು ಸಹ ಆಸ್ಪತ್ರೆಗೆ ಹೋಗಿ ಅವರ ಕುಟುಂಬದವರು ಬರುವವರೆಗೂ ನೋಡಿಕೊಂಡಳು. ಆದರೆ ಆಕೆ ಮೀರಳೊಂದಿಗೆ "ಅಲ್ಲ ಹೇಳಬಾರದು, ಕೆಟ್ಟ ಬಾಯಿ ಮಾಡಿದ್ದಕ್ಕೆ ದೇವರು ಸುಮ್ಮನೆ ಬಿಡಲಿಲ್ಲ ನೋಡು"[8] ಎಂದ ಎಂದು ಅಸಮಾಧಾನ ವ್ಯಕ್ತಪಡಿಸಿದಳು. ಆದರೆ ಈ ಎಲ್ಲಾ ಅಸಮಾದಾನಗಳನ್ನೆಲ್ಲ ಮೀರಿ, ನಿಲ್ಲಬಲ್ಲ ಶಕ್ತಿ ಅಂದಿನ ಸ್ನೇಹ, ಸಹಬಾಳ್ವೆ, ಅಂತಕರಣಕ್ಕೆ ಇತ್ತು. ಅಸಮಾಧಾನ, ಮುನಿಸು, ಬೇಸರ

ಜಗಳಗಳ ನಡುವೆಯೂ ಜಾತಿಯ, ಧರ್ಮದ ಹಂಗನ್ನು ತೊರೆದು ಮಾನವೀಯತೆ ನೆಲೆಯಲ್ಲಿ ಅಂದು ಆ ಕಟ್ಟಡದ ಜನರ ಜೀವನ ಸಾಗುತ್ತಿತ್ತು.

ಆದರೆ ಅದೊಂದು ಕೋಮುಗಲಭೆ ಕುಟುಂಬಗಳ ನಡುವಿನ ಸಾಮರಸ್ಯ ಮತ್ತು ಸಮಾಜಗಳ ನಡುವಿನ ಸಾಮರಸ್ಯ ಭಿನ್ನ ನೆಲೆಯವು ಎಂಬುದನ್ನು ಸಾರಿಬಿಟ್ಟಿತು. ಗಲಭೆ ನಡೆದ ದಿನದಂದೇ ಕಾಲೇಜಿನಿಂದ ಬರುತ್ತಿದ್ದ ಅಫ್ತಾಬನಿಗೆ ಯಾರೋ ಪುಂಡರು ಧಮ್ಕಿ ಕೊಟ್ಟಿದ್ದು, ಝೀಬುನ್ನೀಸಾಳ ಮನೆಯ ಗೋಡೆಗೆ ಯಾರೋ ಪುಂಡರು ಬಂದು ಕೆಂಪು ಕುಂಕುಮ ಇಟ್ಟು ಹೋಗಿದ್ದು, ಅಲ್ಲಿಯ ಜನರೆಲ್ಲರ ಆತಂಕಕ್ಕೆ ಎಡೆ ಮಾಡಿಕೊಟ್ಟಿತು. ಝೀಬುನ್ನೀಸಳು ಮತ್ತು ಅವರ ಕುಟುಂಬ ಇಲ್ಲಿರುವುದು ಒಳಿತಲ್ಲ ಎನಿಸಿ, ಮುಂಬೈನ ಮುಸ್ಲಿಂ ಕಾಲೋನಿಯಲ್ಲಿರುವ ಅವರ ಸಂಬಂಧಿಯ ಮನೆಗೆ ಕಳುಹಿಸಬೇಕಾಯಿತು. ಹೊರಡುವಾಗ, ಯಾರೋ ಆಕೆ ಹಣೆಗೊಂದು ಹಣೆಬೊಟ್ಟು ಇಡುವುದು ಒಳಿತು ಈ ಸಂದರ್ಭದಲ್ಲಿ ಎಂದು ಸೂಚಿಸಿದರು. ಝೀಬುನ್ನೀಸಳಿಗೂ, ಆಕೆಯ ಮಗಳಿಗೂ ಹಣೆಬೊಟ್ಟನ್ನು ಇಟ್ಟು ಕಳುಹಿಸುವ ಪರಿ ಮಾರ್ಮಿಕವಾಗಿದೆ. ಒಂದು ಕಾಲಘಟ್ಟದಲ್ಲಿ ಮೀರಾ ಸೂಚಿಸಿದಾಗ ಅದು ಚಂದದ ಸಂಕೇತವಾಗಿತ್ತು. ಹಾಗೆ ಹಣೆಬೊಟ್ಟು ಇಟ್ಟುಕೊಂಡು ಮೀರಳಿಗೆ ಈಗ ಖುಷಿಯಾಯ್ತು ಎಂದು ಕೇಳಿದ್ದು ಸೌಹಾರ್ದತೆಯ, ಸಾಮರಸ್ಯದ ಬದುಕಿನ ಭಾಗವಾಗಿತ್ತು. ಈಗ ಅದೇ ಹಣೆಬೊಟ್ಟು ಧಾರ್ಮಿಕ ಪರಿಧಿಯೊಳಗೆ ಸ್ಥಾನ ಪಡೆದು, ಜೀವಗಳ ಅಳಿವು ಉಳಿವಿನ ಸಂಕೇತವಾಗಿ ಮಾರ್ಪಾಡಾದದ್ದು ವಿಪರ್ಯಾಸ.

ಝೀಬುನ್ನೀಸಳು ಮುಂಬ್ರಾದ ತಮ್ಮ ಸಂಬಂಧಿಯ ಮನೆಯನ್ನು ಸುರಕ್ಷಿತವಾಗಿ ತಲುಪಿದ್ದಾಳೆ ಎಂದು ತಿಳಿದಾಗ, ಇತ್ತಾ ಕಟ್ಟಡದಲ್ಲಿಯ ಜನರ ಮಧ್ಯದಿಂದ "ಇನ್ನಿಲ್ಲಿ ನಮ್ಮ ಜನಗಳೇ, ಯಾವ ಹೆದರಿಕೆ ಇಲ್ಲ."[9] ಎಂಬ ಮಾತು ಮೀರಳ ಕಿವಿಗೆ ಬಿದ್ದು ಹಾಗೆ ಒಂದು ಕ್ಷಣ ಕಿವಿ ಕೊಡವಿಕೊಳ್ಳುವಂತೆ ಮಾಡುತ್ತದೆ. ಕಟ್ಟಡದಲ್ಲಿದ್ದ ಜನರೆಲ್ಲರೂ ಝೀಬುನ್ನೀಸಳು ಮತ್ತು ಆಕೆಯ ಕುಟುಂಬದ ಕ್ಷೇಮವನ್ನೇ ಅಪೇಕ್ಷಿಸುತ್ತಿರುವ ಹಾಗೆ ಕಂಡರೂ, ಅವರ ಮಾತಿನ ಒಳ ಅರ್ಥ ಭಿನ್ನವಾಗಿದೆ. ಮುಸ್ಲಿಂ ಸಮುದಾಯದ ಝೀಬುನ್ನೀಸಳು ಮತ್ತು ಆಕೆಯ ಕುಟುಂಬ ಆ ಕಟ್ಟಡದಲ್ಲಿದ್ದರೆ ಅವರಿಗೂ ಸಹ ಸಮಸ್ಯೆಯೇ. ಯಾವ ಕ್ಷಣದಲ್ಲಾದರೂ ಯಾರಾದರೂ ತೊಂದರೆ ಮಾಡಬಹುದು ಎಂಬ ಆತಂಕದ ವಾತವರಣದಲ್ಲಿದ್ದ ಜನರಿಗೆಲ್ಲ ಆಕೆ ಸುರಕ್ಷಿತವಾಗಿ ಮುಂಬ್ರಾ ತಲುಪಿರುವ ಸಂಗತಿ ಸಂತಸಕ್ಕೆ ಕರಣವಾಗಿರುವ ಪರಿ ವಿಪರ್ಯಾಸವಾಗಿದೆ. ಅಲ್ಲದೇ ಝೀಬುನ್ನೀಸಳು ತಾಯಿ ಎಂದು ಪರಿಚಯಿಸಿದ್ದ ಜಯಬೆನ್ "ಅವರೆಲ್ಲ ಸ್ವಲ್ಪ ದಿನ ಅಲ್ಲೇ ಇರಲಪ್ಪ"[10] ಎಂಬ ಮಾತು, ದಲ್ವಿ ಕಾಕಿ ಎಂಬ ಮತ್ತೊಬ್ಬ ಹೆಂಗಸು "ಫೋನು ಬಂದರೆ ಅಲ್ಲೇ ಇರಲಿಕ್ಕೆ ಹೇಳಿ"[11] ಎಂದು, ಸಿಂಧಿ ಮುದುಕಿಯು "ಅವರು ಬಂದರೆ ನಮಗೆ ಕತಾರ, ಕಾಯಂ ಆಗಿ ಅಲ್ಲೇ ಇರಲಂತೆ"[12] ಎಂಬ ಮಾತುಗಳು, ಶಿಪ್ರಾ ನಗರದಲ್ಲಿ ನಡೆದ ಕೋಮುಗಲಭೆಯನ್ನು ಸಮರ್ಥಿಸುತ್ತ, ಮುಸ್ಲಿಂಮರಿಗೆಲ್ಲ ಬುದ್ಧಿ ಕಲಿಸಲೇಬೇಕು ಎಂಬ ಕೋಮುವಾದಿ ಧೋರಣೆಯ ಮಾತುಗಳು ಮೀರಾಳನ್ನು ದಂಗುಬಡಿಸುತ್ತವೆ. "ಎಲ್ಲರಿಗೂ ಆಪ್ತಳಾದ ಮುಸ್ಲಿಂ ಯುವತಿ ಝೀಬುನ್ನೀಸಾಳ ಸುರಕ್ಷತೆಯಲ್ಲಿಯೇ ತಮ್ಮ ಸುರಕ್ಷತೆ ಇದೆ ಎನ್ನುವ ಕಟು ಸತ್ಯವನ್ನು ಅರಿತ ಎಲ್ಲರೂ, ಅಂದರೆ ಲೇಖಕಿಯು ಕೂಡ ಆಕೆಯನ್ನು ಮುಂಬ್ರಾದಲ್ಲಿಯೇ ಇರು ಎನ್ನುತ್ತ, ಸಂತೈಸುವುದರಲ್ಲಿ ಅಸಹಾಯಕತೆಯ ಹಾಗೂ ವಿಷಾದತೆಯ ಛಾಯೆ

ಅಡಗಿದೆ."[13] ಎಂಬ ಮಮತಾ ರಾವ್ ಅವರ ಮಾತುಗಳು ಜನರೊಳಗಿರುವ ನೈಜ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಅಲ್ಲದೆ ಅತ್ತ ಮುಂಬ್ರಾದಲ್ಲಿಯ ಮುಸ್ಲಿಂ ಕಾಲೋನಿಯ ತನ್ನ ಸಂಬಂಧಿಕರ ಮನೆಯನ್ನು ಸೇರಿದ ಝೋಬುನ್ನೀಸಳು "ನೀವೇನು ಹೆದರಬೇಕಿಲ್ಲ ನಾವಿಲ್ಲಿ ಕ್ಷೇಮ. ನಮ್ಮವರ ನಡುವೆ ಇದ್ದೆವಲ್ಲ, ಇಲ್ಲೇನು ಅಪಾಯವಿಲ್ಲ"[14] ಎಂಬ ಮಾತು ಮೀರಾಳಿಗೆ ಮತ್ತಷ್ಟು ಆಘಾತವನ್ನುಂಟು ಮಾಡುತ್ತದೆ.

ಕಟ್ಟಡದಲ್ಲಿಯ ಜನರು ಹಾಗೂ ಝೋಬುನ್ನಿಸಳು ಸಹ ನಮ್ಮ ಜನಗಳೆ, ನಮ್ಮವರೇ ಎಂಬ ಮಾತುಗಳು ನಿರೂಪಕಿಯಲ್ಲಿ ಹಲವು ಆಲೋಚನೆಗಳನ್ನು ಹುಟ್ಟುಹಾಕುತ್ತವೆ. ಪರಿಸ್ಥಿತಿ ಕೊಂಚ ಬದಲಾದದ್ದೇ ತಡ ಝೋಬುನ್ನೀಸಳ ಆದಿಯಾಗಿ ಎಲ್ಲರೂ ಬದಲಾಗುವ ಪರಿ, ಧಾರ್ಮಿಕ ಪರಿಧಿಯೊಳಗೆ ನುಸುಳುವ ಪರಿ ಓದುಗರನ್ನು ಚಿಂತನೆಗೆ ಹಚ್ಚುತ್ತವೆ. ಯಾವುದೇ ಜಾತಿ ಧರ್ಮದ ಹಂಗಿಲ್ಲದೆ ಪರಸ್ಪರ ಸಹಕಾರ, ಸೌಹಾರ್ದತೆ ಯಿಂದ ಎಲ್ಲರೂ ಕೂಡಿ ಒಂದು ಅವಿಭಕ್ತ ಕುಟುಂಬದಂತೆ ಇದ್ದ ಕಟ್ಟಡದ ಜನರಲ್ಲಿ, ಕೋಮು ಗಲಾಟೆ ಎಲ್ಲರನ್ನು ಪ್ರತ್ಯೇಕವಾಗಿಸಿದ ಪರಿ ಬಹಳ ವಿಷಾದನೀಯ. ಅಲ್ಲದೆ ಮುಂಬೈನ ಬದಲಾದ ಸಾಮಾಜಿಕ ಪರಿಸರವನ್ನು ಸಹ ಇದು ಸೂಚಿಸುತ್ತದೆ. ಈ ಬದಲಾದ ಜನರ ಮನಸ್ಥಿತಿಯ ಬಗ್ಗೆ ನಿರೂಪಕಿಯ ಮೂಲಕ ಕಥೆಗಾರ್ತಿ ಹಲವು ಪ್ರಶ್ನೆಗಳನ್ನು ಕತೆಯೊಳಗೆ ಎತ್ತಿದ್ದಾರೆ. "ಮನುಷ್ಯನ ಮೂಲಭೂತ ಜನಾಂಗೀಯ ಅರಿವು ನಮ್ಮೊಳಗೆಲ್ಲ ಹುದುಗಿಯೇ ಇರುವುದೇ ಹಾಗಾದರೆ? ಯಾವಾಗ ನಾವು ಕೇವಲ ಒಬ್ಬ ವ್ಯಕ್ತಿಯಾಗಿರುತ್ತೇವೆ ಮತ್ತು ಯಾವಾಗ ಒಂದು ಜನಾಂಗದ, ಒಂದು ಗುಂಪಿನ ಭಾಗವಾಗಿ ಬಿಡುತ್ತೇವೆ? ಮನಸ್ಸಿನೊಳಗೆ ಇದಕ್ಕಾಗಿ ಒಂದು ಪ್ರತ್ಯೇಕ ಗುಂಡಿಯೇನಾದರೂ ಇರಬಹುದೇ? ಗುಂಡಿ ಅದುಮಿದರೆ ಒಂದು ಭಾವ, ಆರಿಸಿದಾಗ ಇನ್ನೊಂದು?"[15] ಎಂಬ ಪ್ರಶ್ನೆಗಳು ಮನುಷ್ಯನ ಅಂತರಾಳವನ್ನು ಶೋಧಿಸ ಹೊರಟಿವೆ. ಅಲ್ಲದೆ ಜನಾಂಗೀಯ ಅರಿವನ್ನು ಮನುಷ್ಯ ಮೆಟ್ಟಿ ನಿಲ್ಲಲು ಸಾಧ್ಯವಿಲ್ಲವೇ? ಮೂಲಭೂತವಾಗಿರುವ ಜನಾಂಗೀಯ ಅರಿವು ಮನುಷ್ಯ ಮನುಷ್ಯನ ನಡುವೆ ಗೋಡೆಯನ್ನು ಕಟ್ಟುವುದಾದರೆ ಅದನ್ನು ಒಪ್ಪುವುದಾದರೂ ಹೇಗೆ? ಮನುಷ್ಯ ಒಂದು ಗುಂಪಿನ ಭಾಗವಾಗಿ ಸೇರಿಕೊಳ್ಳುವುದು ಏಕೆ? ಇತ್ಯಾದಿ ಪ್ರಶ್ನೆಗಳನ್ನು ಓದುಗರಲ್ಲಿ ಕಥೆ ಹುಟ್ಟು ಹಾಕುತ್ತದೆ.

ಸ್ವಜಾತಿ, ಸ್ವಧರ್ಮದ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡು, ಅನ್ಯ ಜಾತಿ, ಧರ್ಮವನ್ನು ಗೌರವಿಸುವ ಪ್ರತಿಯೊಬ್ಬ ವ್ಯಕ್ತಿಯು ಭಾರತವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ ನೋಡಲು ಇಷ್ಟಪಡುತ್ತಾನೆ. ಯಾವುದೋ ಒಂದು ಜನಾಂಗದ, ಧರ್ಮದ ಭಾಗವಾಗಿ ಆತ ಹೋಗಲಾರ. ಮನುಜ ಮತ ಆತನ ದಾರಿಯಾಗುತ್ತದೆ. ಭಾರತಕ್ಕೆ ಪ್ರಾಚೀನ ಕಾಲದಿಂದಲೂ ಬಂದ ವಿವಿಧ ಜನಾಂಗಗಳು ಮೂಲತಃ ಭಿನ್ನವಾಗಿರುತ್ತವೆ. ಇದು ವಾಸ್ತವ ಸಂಗತಿಯೂ ಹೌದು. ಈ ಭಿನ್ನತೆಗಳನ್ನು ಗೌರವಿಸುವ, ಆ ಮೂಲಕ ಕೋಮುಗಲಭೆಗೆ ಕಾರಣವಾಗುವ ಸಂಗತಿಗಳನ್ನು ಆತ ವಿರೋಧಿಸುತ್ತಾನೆ. ಮುಖ್ಯವಾಗಿ ಇಂದು ಕೋಮು ಗಲಭೆಯು ರಾಜಕೀಯ ಆಯಾಮವನ್ನು ಪಡೆದುಕೊಂಡಿದೆ. ರಾಜಕಾರಣಿಯು ಧರ್ಮವನ್ನು ತನ್ನ ರಾಜಕೀಯ ದಾಳವನ್ನಾಗಿಸಿಕೊಳ್ಳುತ್ತಿದ್ದಾನೆ. ಹಿಂಸಾತ್ಮಕ ಕೃತ್ಯ, ದೊಂಬಿಗಲಾಟೆಗಳ ಮೂಲಕ ಜನರನ್ನು ಭಯಭೀತಗೊಳಿಸಿ, ಧಾರ್ಮಿಕವಾಗಿ ಸಂಘಟಿತರಾಗುವಂತೆ ಮಾಡುವ, ಮತ್ತೊಂದು ಧರ್ಮವನ್ನು ದ್ವೇಷಿಸುವ ಮನೋಭಾವನೆ ಬೆಳೆಸುವ ಪರಿ ಸ್ವಾರ್ಥ ರಾಜಕಾರಣದ್ದಾಗಿದೆ. ಇದನ್ನು ಅರಿತ ವ್ಯಕ್ತಿ

ಅಸಮಾನತೆ ಸೃಷ್ಟಿಸುವ ಜನಾಂಗದ ಮೂಲಬೇರನ್ನು ಕಿತ್ತೆಸೆದು ಯಾವುದೇ ಜನಾಂಗದ ಭಾಗವಾಗದೆ ಏಕತೆಯ ಭಾವದೊಳಗೆ ತನ್ನನ್ನು ಗುರುತಿಸಿಕೊಳ್ಳುತ್ತಾನೆ.

ಇಲ್ಲಿ ಕಥೆಯ ಶೀರ್ಷಿಕೆಯಾದ ಅಲ್ಲೇ ಇರು ಎಂಬ ವಾಕ್ಯಕ್ಕೂ ಪ್ರಸ್ತುತ ಸನ್ನಿವೇಶಕ್ಕೂ ನಂಟಿದೆ. ಕಟ್ಟಡದಲ್ಲಿ ಜನರು ಕಾಳಜಿಯುಕ್ತ ಮಾತಂತೆ ಕಾಣುವ ಅಲ್ಲೇ ಇರು, ಅಲ್ಲೇ ಇರಲಿಕ್ಕೆ ಹೇಳಿ ಇತ್ಯಾದಿ ಮಾತುಗಳು ಕಾಳಜಿಯ ಮುಖ ಹೊತ್ತ ಸ್ವಾರ್ಥ ವ್ಯಕ್ತಿತ್ವದ ಅನಾವರಣವಾಗಿದೆ. ಅಲ್ಲೇ ಇರು ಎಂಬುದು ಅನ್ಯಳನ್ನಾಗಿಸುವ, ಸ್ವರಕ್ಷಣೆಯ ಉದ್ದೇಶದ ಮಾತಾಗಿ ಪ್ರಸ್ತುತ ಕಥೆಯಲ್ಲಿ ಪ್ರತಿಧ್ವನಿಸುತ್ತದೆ. ಅಲ್ಲದೇ ಅಲ್ಲೇ ಇರು ಎಂಬ ವಾಕ್ಯವು ಇರುವಲ್ಲಿಯೇ ಇದ್ದುಕೊಂಡು, ಇರುವ ವ್ಯವಸ್ಥೆಯನ್ನು ಒಪ್ಪಿಕೊಂಡು ಹೋಗುವುದು. ಅನ್ಯಾಯಕ್ಕೆ ಪ್ರತಿಭಟನೆ ಒಡ್ಡದೇ, ಜಾತಿ ಧರ್ಮಗಳ ಗೋಡೆಗಳ ನಡುವೆಯೇ ವಾಸಿಸುವ ಪ್ರತಿಗಾಮಿ ಬದುಕನ್ನು ಧ್ವನಿಸುತ್ತದೆ.

ಮಿತ್ರಾ ವೆಂಕಟ್ರಾಜರ ಪ್ರಸ್ತುತ ಕಥೆಯು ಕೆಲ ದಶಕಗಳ ಹಿಂದಿನ ಕಥೆಯಾದರೂ, ಇಂದಿನ ದಿನಗಳಿಗೂ ಅನ್ವಯಿಸುವಂತಹ ಕಥೆಯಾಗಿದೆ. ಇಂದು ಮೇಲ್ನೋಟಕ್ಕೆ ಸಾಮರಸ್ಯವನ್ನು ಬಯಸುವ, ಆದರೆ ಒಂದು ಮತ, ಪಂಥಗಳ ಬಾವುಟ ಹಿಡಿದು ಧರ್ಮಾಂಧರಾಗುವ ಪರಿಯನ್ನು ಕಥೆಗಾರ್ತಿ ತಮ್ಮ 'ಅಲ್ಲೇ ಇರು' ಎಂಬ ಕಥೆಯ ಮೂಲಕ ಟೀಕಿಸಿದ್ದಾರೆ. "ಎಲ್ಲವೂ ಸರಿಯಾಗಿರುವಾಗ ಎಲ್ಲರೂ ನಮ್ಮವರೇ, ಜಾತಿ, ಮತ, ಧರ್ಮ, ಕಲಹ, ಗಲವೇ ಎಂತೆಂದಾಗ ನಮ್ಮ ಜನ ವ್ಯಾಖ್ಯಾನ ಬದಲಾಗುವುದು ವಿಕೃತ ವಿಡಂಬನೆಯಾಗಿದೆ."[16] ಆದರೆ ಇದು ಬೆಳವಣಿಗೆಯ ಹಂತದಲ್ಲಿರುವ ಭಾರತಕ್ಕೆ ಬಹುದೊಡ್ಡ ಮಾರಕ. ಎಲ್ಲರೂ ಜಾತಿ, ಧರ್ಮ, ಪಂಥ, ಸಂಸ್ಕೃತಿಯ ಹೆಸರಿನಲ್ಲಿ ಪ್ರತ್ಯೇಕಗೊಳ್ಳುತ್ತಾ, ಭಿನ್ನತೆಯನ್ನು ದ್ವೇಷಿಸುತ್ತಾ ಸಾಗುವುದು ಸಮಾಜದ ಆರೋಗ್ಯಕ್ಕೆ ಹಾನಿಕಾರಕ. ಮನುಷ್ಯತ್ವ ಮನುಷ್ಯನ ಅಂತರಾಳದ ಮಾತಾಗಬೇಕು. ತೋರಿಕೆಯ ಸೌಹಾರ್ದತೆ ತೊಲಗಬೇಕು. ಭಿನ್ನತೆಯನ್ನು ಗೌರವಿಸುವ ಆ ಮೂಲಕ ಏಕತೆಯನ್ನು ಕಾಪಾಡುವ ಧೋರಣೆ ಎಲ್ಲರದಾಗಬೇಕು. ಎಂಬ ಕಾಳಜಿ ಪ್ರಸ್ತುತ ಕಥೆಯಾಗಿದೆ.

ಪ್ರಸ್ತುತ ಕಥೆಯು ಎರಡು ವಿಶೇಷತೆಗಳನ್ನು ಒಳಗೊಂಡಿದೆ. ಮೊದಲನೆಯದು ಕಥೆ ಅಪ್ಪಟ ಮುಂಬೈ ಕತೆಯಾಗಿದೆ. ಎರಡನೆಯದು ಕಥೆಯಲ್ಲಿ ಮಹಿಳೆಯರೇ ಮುಖ್ಯ ಪಾತ್ರಗಳಾಗಿದ್ದು ಆ ಮೂಲಕ ನಗರದೊಳಗಿನ ಕೋಮುವಾದವನ್ನು ಮಹಿಳಾ ದೃಷ್ಟಿಕೋನದಿಂದ ನೋಡಿರುವ ಪರಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ. ವಿವಿಧ ಭಾಷೆಯ, ಸಂಸ್ಕೃತಿಯ, ಧರ್ಮದ ಪಾತ್ರಗಳನ್ನು ಲೇಖಕಿ ಮಿತ್ರಾ ವೆಂಕಟ್ರಾಜರು ತಮ್ಮ ಕಥೆಗಳಲ್ಲಿ ತರುವ ಮೂಲಕ ನಗರ ಪ್ರಜ್ಞೆಯನ್ನು ಹಿಡಿದಿಟ್ಟಿದ್ದಾರೆ. ಮಿತ್ರಾ ವೆಂಕಟ್ರಾಜರ ಈ ವರಗಿನ ಸಮಗ್ರ ಕಥೆಗಳನ್ನು ಅವಲೋಕಿಸಿದಾಗ ಅವರ ಹಲವಾರು ಮುಂಬೈ ಕೇಂದ್ರಿತ ಕಥೆಗಳಲ್ಲಿ ಸೌಹಾರ್ದತೆಯನ್ನು ಕಾಪಾಡುವ, ಸಹಬಾಳ್ವೆಗಾಗಿ ಹಾತೊರೆಯುವ ವಿವಿಧ ಧರ್ಮದ ಪಾತ್ರಗಳನ್ನು ಕಥೆಯೊಳಗೆ ತರುವ ಮೂಲಕ ಸೌಹಾರ್ದತೆಯನ್ನು ಮೆರೆದಿದ್ದಾರೆ. ಸಂಬಂಧ ಕಥೆಯ ಹಂಸಬೆನ್, ಕೋಕಿಲ, ಗೋವರ್ಧನ ಉಡುಪ ಪಾತ್ರಗಳು, ಸೋಫಿ ಕಟ್ಟಿದ ಮನೆ ಕಥೆಯ ಸೋಫಿ ಪಾತ್ರ, ಈದ್ ಕಾ ಚಾಂದ್ ಕತೆಯ ಇಕ್ಬಾಲ್ ಖಾನ್ ಪಾತ್ರ, ಮಿನುಗಲೇ ಮಿನುಗಲೇ ನಕ್ಷತ್ರ ಕಥೆಯ ಪೆರಿನಾಝ್ ವಾಡಿಯ ಹೀಗೆ ಬಹುದರ್ಮಿಯ, ಬಹು ಸಂಸ್ಕೃತಿಯ ಪಾತ್ರಗಳನ್ನು ತಮ್ಮ ಕಥೆಗಳೊಳಗೆ ತರುವ ಮೂಲಕ ಮುಂಬೈನ ಸಾಮರಸ್ಯದ ಬದುಕನ್ನು ಚಿತ್ರಿಸಿದ್ದಾರೆ. ಅಲ್ಲದೆ ತಮ್ಮ ಕಥೆಗಳ ಮೂಲಕ ಮತೀಯ, ಭಾಷೆಯ,

ಜಾತಿಯ ಇತ್ಯಾದಿ ಭಾವೈಕ್ಯತೆಗೆ ಧಕ್ಕೆ ತಂದು, ಹಿಂಸೆಗೆ ಕಾರಣವಾಗುವ ಅಂಶಗಳನ್ನು ಖಂಡಿಸಿ, ಓದುಗರಿಗೆ ಸಹಬಾಳ್ವೆಯ ಪ್ರಾಮುಖ್ಯತೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. "ಮಿತ್ರಾ ಅವರು ತಮ್ಮ ಕಥೆಗಳಲ್ಲಿ ಜೀವನವನ್ನು ಗ್ರಹಿಸುವ, ವಿಶ್ಲೇಷಿಸುವ, ತೂಗಿ ನೋಡುವ ಪರಿ ಗಮನೀಯ ಅಂಶ. ಪ್ರಬುದ್ಧ ಜೀವನ ದೃಷ್ಟಿ, ಗಟ್ಟಿಯಾದ ಅನುಭವ, ಪ್ರಖರ ಸಾಮಾಜಿಕತೆ, ಸಂಬಂಧಗಳ ಶೋಧ ಮಿತ್ರಾ ಅವರ ಬರವಣಿಗೆಯಲ್ಲಿ ಎದ್ದು ಕಾಣುವ ಅಂಶ."[17] ಎಂಬ ಜಿ. ಎನ್. ಉಪಾಧ್ಯರ ಹೇಳಿಕೆ ಮಿತ್ರಾ ವೆಂಕಟ್ರಾಜ ಅವರ ಇಡೀ ಸಾಹಿತ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಎರಡು ಭಿನ್ನ ಕೋಮುಗಳ ನಡುವೆ ವಿವಿಧ ಕಾರಣಗಳಿಗಾಗಿ ಗಲಾಟೆ, ಜಗಳಗಳು ಏರ್ಪಟ್ಟರೆ ಅದನ್ನು ಕೋಮುಗಲಬೆ ಎನ್ನುವರು. ಕೋಮುಗಲಬೆಯು ಧಾರ್ಮಿಕ, ರಾಜಕೀಯ ಪ್ರೇರಿತವಾಗಿರುತ್ತವೆ. ಇಂತಹ ಕೋಮುಗಲಬೆಯಿಂದಾಗಿ ಅಪಾರ ಪ್ರಾಣಹಾನಿ, ಆಸ್ತಿನಷ್ಟಗಳಾಗಿ ಸಾಮಾಜಿಕ ವ್ಯವಸ್ಥೆ ಹದಗೆಡುತ್ತವೆ. ಇದರಿಂದ ದೇಶದ ಅಭಿವೃದ್ಧಿ ಕುಂಟಿತವಾಗುತ್ತದೆ. ದೇಶದಲ್ಲಿ ಈವರೆಗೂ ನೂರಾರು ಕೋಮು ಸಂಘರ್ಷಗಳು ನಡೆದಿವೆ. 1947ರ ಭಾರತದ ಸ್ವಾತಂತ್ರ್ಯನಂತರ ದೇಶವಿಭಜನೆಯ ಸಂದರ್ಭದಲ್ಲಿ ಆದ ಕೋಮು ಹಿಂಸಾಚಾರ ಐತಿಹಾಸಿಕ ಗಲಬೆಯಾಗಿದ್ದು, ಸುಮಾರು 2 ಲಕ್ಷಕ್ಕೂ ಅಧಿಕ ಜನರು ಪ್ರಾಣಕಳೆದುಕೊಂಡರೆಂದು ದಾಖಲಾಗಿದೆ. 1969ರಂದು ಅಹಮದಾಬಾದ್‌ನಲ್ಲಿ ದೇವಾಲಯ ಮತ್ತು ಮಸೀದಿ ವಿಚಾರವಾಗಿ ನಡೆದ ಗಲಾಟೆಯಿಂದ ಸುಮಾರು 660 ಜನರು ಅಸುನೀಗಿದರು. 1980 ರಂದು ಮೊರಾದಾಬಾದ್‌ನಲ್ಲಿ ಈದ್ ಪ್ರಾರ್ಥನೆಯ ಸಂದರ್ಭದಲ್ಲಿ ಉಂಟಾದ ಗಲಬೆಯಿಂದ 400ಕ್ಕೂ ಅಧಿಕ ಜನರು ಜೀವತೆತ್ತಿದ್ದಾರೆ. 1983ರಂದು ನೆಲ್ಲಿಯಲ್ಲಿ ಮತದಾರರ ಪಟ್ಟಿಯಲ್ಲಿ ಅಕ್ರಮ ವಲಸಿಗರಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಆದ ಗಲಬೆಯಿಂದಾಗಿ 2,191 ಜನರು ಸಾವನ್ನಪ್ಪಿದ್ದಾರೆ. 1984ರ ಸಂದರ್ಭದಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರನ್ನು ಸಿಖ್ ಅಂಗರಕ್ಷಕರು ಹತ್ಯೆಮಾಡಿದ ನಂತರ ಪ್ರತೀಕಾರವಾಗಿ ನಡೆದ ಹಿಂಸಾಚಾರದಲ್ಲಿ ಸುಮಾರು 2,733 ಜನರು ಮೃತರಾಗಿದ್ದಾರೆ. 1992 – 93ರ ಸಂದರ್ಭದಲ್ಲಿ ಬಾಬ್ರಿ ಮಸೀದಿ ಧ್ವಂಸದ ನಂತರ ದೇಶದಾದ್ಯಂತ ಉಂಟಾದ ಉದ್ವಿಗ್ನತೆಯ ಪರಿಣಾಮವಾಗಿ ಮುಂಬೈನಲ್ಲಿ ನಡೆದ ಗಲಬೆಯಲ್ಲಿ 900 ಕ್ಕೂ ಅಧಿಕ ಜನರು ಹತ್ಯೆಯಾಗಿದ್ದಾರೆ. 2002 ರಲ್ಲಿ ಗೋಧ್ರಾ ರೈಲು ನಿಲ್ದಾಣದಲ್ಲಿ ಆದ ದುರಂತವು ಕೋಮುವಾದದ ಆಯಾಮ ಪಡೆದು, 1,044 ಜನರ ಮಾರಣಹೋಮಕ್ಕೆ ಕಾರಣವಾಗಿದೆ.

ಇವಷ್ಟೇ ಅಲ್ಲದೇ ದೇಶದ ನಾನಾ ಭಾಗಗಳಲ್ಲಿ ಹಿಂದೂ, ಮುಸ್ಲಿಂ, ಸಿಖ್ ಹೀಗೆ ಧರ್ಮ ಧರ್ಮಗಳ ನಡುವೆ, ಜಾತಿ ಜಾತಿಗಳ ನಡುವೆ ಗಲಬೆಗಳು ನಡೆದಿದ್ದು, ಸಾವಿರಾರು ಕುಟುಂಬಗಳು ಬೀದಿಪಾಲಾಗಿವೆ. ಈ ದಳ್ಳುರಿಗೆ ಬಲಿಯಾದವರ ಸಂಖ್ಯೆ ಸಾವಿರದಿಂದ ಲಕ್ಷ ಮುಟ್ಟಿದೆ. ಈ ಕೋಮುವಾದವು ಜನರನ್ನು ಧಾರ್ಮಿಕ ಗುಂಪುಗಳನ್ನಾಗಿ ಪ್ರತ್ಯೇಕಿಸುವ ಮೂಲಕ ಜನರಲ್ಲಿ ಇನ್ನಿಲ್ಲಿ ನಮ್ಮ ಜನಗಳೇ ಎಂಬ ಹುಸಿ ಭಾವ ಮೂಡಲು ಕಾರಣವಾಗಿದೆ. ಕೋಮುಗಲಬೆಯು ಭಿನ್ನ ಕೋಮಿನ ನಡುವೆ ನಡೆಯುವುದರಿಂದ ಸಹಜವಾಗಿ ಇದು ವ್ಯಕ್ತಿವ್ಯಕ್ತಿಗಳ ನಡುವಿನ ಹೋರಾಟವಾಗದೆ, ಎರಡು ವ್ಯವಸ್ಥೆಗಳ ನಡುವಿನ ದ್ವೇಷವಾಗಿರುತ್ತದೆ. ಇದರೊಳಗೆ ಸಿಲುಕಿದ ಯಾವುದೇ ಅಮಾಯಕ ವ್ಯಕ್ತಿಗೂ ಸುರಕ್ಷತೆ ಬೇಕಾಗುತ್ತದೆ. ಅಂತಹ ಸುರಕ್ಷತೆ ಜನರಲ್ಲಿ ನಮ್ಮ ಜನಗಳೇ ಎಂಬ ಭಾವ ಮೂಡಿಸಿರಬಹುದು. ಆದರೆ ಅದನ್ನು ಮೀರಿ

ಕೋಮುಗಲಬೆಯನ್ನು ಎದುರಿಸಿ ನಿಲ್ಲಬೇಕೆಂಬುದನ್ನು ಕತೆ ವ್ಯಕ್ತಪಡಿಸುತ್ತಿದೆ. ಆದರೂ ವಾಸ್ತವದಲ್ಲಿ ಅದು ಕಷ್ಟವಾಗಿದೆ. ಕೋಮುಗಲಬೆಗಳು ಆಗದಂತಹ ವ್ಯವಸ್ಥೆ ನಿರ್ಮಾಣವಾದಾಗ ಮಾತ್ರ ಎಲ್ಲರಲ್ಲು ನಮ್ಮವರೆಂಬ ಭಾವ ಮೂಡಲು ಸಾಧ್ಯ

ಕೊನೆಟಿಪ್ಪಣಿಗಳು

1. ರಹಮತ್ ತರೀಕೆರೆ. (ಸಂ.). ಮಾತು ತಲೆಯೆತ್ತುವ ಬಗೆ. ಪುಟ. 263
2. ಅದೇ. ಪುಟ. 262
3. ಮಿತ್ರಾ ವೆಂಕಟ್ರಾಜ. *ಹಕ್ಕಿ ಮತ್ತು ಅವಳು.* ಪುಟ. 96
4. ಹೌಸಿ ಆಟ – ಬಹುಮಂದಿ ಸೇರಿ ಆಡುವ ಆಟ ಇದಾಗಿದ್ದು, ಸಂಖ್ಯೆಗಳ ಮೂಲಕ ಈ ಆಟ ನಡೆಯುತ್ತದೆ. ಮುಂಬೈ ನಗರದಲ್ಲಿನ ಬಹುಮಹಡಿ ಕಟ್ಟಡ, ಚಾಳ್‌ಗಳಲಿ ನಡೆಯುವ ಆಟ ಇದಾಗಿದ್ದು, ಸಾಮರಸ್ಯದ ಸಂಕೇತವಾಗಿ ಆಡುತ್ತಾರೆ.
5. ಮಿತ್ರಾ ವೆಂಕಟ್ರಾಜ. *ಪೂರ್ವೋಕ್ತ.* ಪುಟ. 85
6. ಅದೇ. ಪುಟ. 89
7. ಅದೇ. ಪುಟ. 90
8. ಅದೇ. ಪುಟ. 90
9. ಅದೇ. ಪುಟ. 92
10. ಅದೇ. ಪುಟ. 92
11. ಅದೇ. ಪುಟ. 94
12. ಅದೇ. ಪುಟ. 95
13. ಮಮತಾ ರಾವ್. *ಮುಂಬೈ ಕನ್ನಡ ಕಥಾ ಸಾಹಿತ್ಯ.* ಪುಟ, 263
14. ಮಿತ್ರಾ ವೆಂಕಟ್ರಾಜ. *ಪೂರ್ವೋಕ್ತ.* ಪುಟ 95
15. ಅದೇ. ಪುಟ. 96
16. ಸವಿತಾ ಅರುಣ್ ಶೆಟ್ಟಿ. *ಬೆಳಕೆಂಡಿ.* ಪುಟ. 78
17. ರಾವ್ ಎಚ್. ಬಿ.ಎಲ್. (ಪ್ರ. ಸಂ), ಉಪಾಧ್ಯ ಜಿ. ಎನ್. (ಸಂ). ಮಿತ್ರಾವಳಿ. ಪುಟ. 5

ಪರಾಮರ್ಶನ ಗ್ರಂಥಗಳು

- ಮಮತಾ ರಾವ್. (2013). *ಮುಂಬೈ ಕನ್ನಡ ಕಥಾ ಸಾಹಿತ್ಯ.* ಕನ್ನಡ ಅಧ್ಯಯನ ವಿಭಾಗ, ಮುಂಬೈ ವಿಶ್ವವಿದ್ಯಾಲಯ.
- ಮಿತ್ರಾ ವೆಂಕಟ್ರಾಜ. (1997). *ಹಕ್ಕಿ ಮತ್ತು ಅವಳು.* ಸಾಹಿತ್ಯ ಪ್ರಕಾಶನ.
- ರಾವ್, ಎಚ್. ಬಿ. ಎಲ್. (ಪ್ರ. ಸಂ.)., ಉಪಾಧ್ಯ ಜಿ. ಎನ್. (ಸಂ.). (2015). *ಮಿತ್ರಾವಳಿ.* ಕನ್ನಡ ಸಾಹಿತ್ಯ ಪರಿಷತ್ತು, ಮಹರಾಷ್ಟ್ರ ಘಟಕ.

- ರಹಮತ್ ತರೀಕೆರೆ (ಸಂ.). (2002). *ಮಾತು ತಲೆಯೆತ್ತುವ ಬಗೆ.* ಕನ್ನಡ ವಿಶ್ವವಿದ್ಯಾಲಯ.
- ಸವಿತಾ ಅರುಣ್ ಶೆಟ್ಟಿ. (2013). *ಬೆಳಕಿಂಡಿ.* ಶ್ರೀ ರಾಮ ಪ್ರಕಾಶನ.